ಶಾಲೆಗಳನ್ನು) ಹೊರತು ಪಡಿಸಿ ವೃಥಾ ಅಧಿಕ ವೆಚ್ಚಕ್ಕೆ ಅವಕಾಶ ಕೊಡಬಾರದೆಂದು ಆದೇಶ ನೀಡಲಾಗಿದೆ.

ಆದ ಕಾರಣ ಈ ಇಲಾಖೆಯ ಪ್ರಸ್ತಾವನೆಗಳು ಹೊಸ ಹುದ್ದೆಗಳ ಸೃಷ್ಟಿ ಬಗ್ಗೆ ಇದ್ದ ಕಾರಣ ತಿರಸ್ಕರಿಸಲಾಯಿತು.

1991-92ನೇ ಸಾಲಿನಲ್ಲಿ ಪುತ್ತೂರು, ಕಾರ್ಕಳ ಮತ್ತು ಸ್ಥಳಿಗ್ರಾಮಗಳಲ್ಲಿ ಗ್ರಂಥಾಲಯ ಕಟ್ಟಡಗಳನ್ನು ಕಟ್ಟಲು ಮಂಜೂರಾತಿಯನ್ನು ನೀಡಲಾಗಿದೆ.

ಮೂಡಬಿದ್ರೆ ಸಬ್ ಸ್ಟೇಷನ್ ಕಾಮಗಾರಿ ಕೆಲಸ

3283 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಬಿದ್ರೆ ಸಬ್ ಸ್ಟೇಷನ್‌ನ ಕಾಮಗಾರಿ ಕೆಲಸವು ಯಾವ ಹಂತದಲ್ಲಿದೆ?

ಆ) 1991ಜೂನ್ ತಿಂಗಳ ಮೊದಲೇ ಉಪಕೇಂದ್ರವು ಪ್ರಾರಂಭವಾಗುವುದೆಂದು ಹೇಳಲಾಗಿದ್ದರೂ ಅದು ತಡವಾಗಲು ಕಾರಣವೇನು?

ಇ) ಅದರ ಕೆಲಸವು ಯಾವಾಗ ಪೂರ್ತಿಗೊಳ್ಳುವುದು?

ಈ) ಈ ಉಪಕೇಂದ್ರದ ನಿರ್ಮಾಣಕ್ಕೆ ಒಟ್ಟು ಎಷ್ಟು ಹಣ ವೆಚ್ಚವಾಗುವುದು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಮೂಡಬಿದ್ರಿ ಸಬ್ ಸ್ಟೇಷನ್‌ನ ಸಿವಿಲ್ ಕಾಮಗಾರಿಗಳ ಕೆಲಸ ಪ್ರಗತಿಯಲ್ಲಿದೆ.

ಆ) ಮುಂಗಾರಿನ ತಿಂಗಳುಗಳಲ್ಲಿ ತಲೆದೋರಿರುವ ಪ್ರತಿಕೂಲ ಹವಾಮಾನ ಮತ್ತು ಗಟ್ಟಿಮಣ್ಣಿನಿಂದ ಕೂಡಿದ ಈ ಸ್ಥಳವನ್ನು ಸಮತಟ್ಟು ಮಾಡುವುದಕ್ಕೆ ತೆಗೆದುಕೊಂಡ ಕಾಲದಿಂದ ಈ ನಿರ್ಮಾಣ ಕಾರ್ಯವಿಳಂಬವಾಗಿದೆ. ಅದಾಗ್ಯೂ ನಿರ್ಮಾಣ ಕಾರ್ಯವನ್ನು ಈಗ ಚುರುಕುಗೊಳಿಸಲಾಗುತ್ತಿದೆ.

ಇ) ಮುಂಬರುವ ತಿಂಗಳುಗಳಲ್ಲಿ ಬಾಕಿ ಉಳಿದಿರುವ ನಿರ್ಮಾಣ ಕಾರ್ಯಗಳನ್ನು ತ್ವರಿತಗೊಳಿಸಿ ಮಾರ್ಚ್ 92ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಿದೆ.

ಈ) ಈ ವಿದ್ಯುತ್ ಉಪ ಕೇಂದ್ರದ ನಿರ್ಮಾಣಕ್ಕೆ ತಗಲುವ ಅಂದಾಜು ವೆಚ್ಚ 92.73 ಲಕ್ಷ ರೂಪಾಯಿಗಳು.

ದ. ಕನ್ನಡ ಜಿಲ್ಲೆಯಲ್ಲಿನ ಸಾರ್ವಜನಿಕ ಗ್ರಂಥಾಲಯಗಳು

3392 - ಶ್ರೀ ಸೋಮಪ್ಪ ಸುವರ್ಣ(ಮೂಡಬಿದ್ರೆ) :ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಸಾರ್ವಜನಿಕ ಗ್ರಂಥಾಲಯಗಳಿಗೆ

ಆ) ಇತ್ತೀಚೆಗೆ ಈ ಗ್ರಂಥಾಲಯಗಳ ಬೆಳವಣಿಗೆ ಕುಂಠಿತವಾಗಲು ಕಾರಣವೇನು?

ಇ) ಪ್ರತಿ ಮಂಡಲದಲ್ಲಿಯೂ ಸರ್ಕಾರವು ಗ್ರಂಥಾಲಯ ತೆರೆಯುವ ಯೋಜನೆ ಹಾಕಿಕೊಂಡಿರುವುದೇ?

ಈ) ಗ್ರಂಥಾಲಯ ಸಿಬ್ಬಂದಿ ವರ್ಗದಲ್ಲಿ ತಮ್ಮ ಇಲಾಖೆಯಲ್ಲಿ ಬೆಳವಣಿಗೆ ಇಲ್ಲದೆ ತೊಂದರೆಯಾದ ಬಗ್ಗೆ ಮನವಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಈ ಇಲಾಖೆಯ ಅಭಿವೃದ್ಧಿ ಬಗ್ಗೆ ಸರ್ಕಾರ ಯಾವ ಯೋಜನೆ ಹಮ್ಮಿಕೊಂಡಿದೆ.

ಊ)ಮಂಗಳೂರು ನಗರ ಸಂಚಾರಿ ಗ್ರಂಥಾಲಯದ ಸೇವೆ ನಿಲ್ಲಿಸಲು ಕಾರಣವೇನು?